ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅಧ್ಯಕ್ಷರೆ, ನಿಮಗೆ ಕ್ಷಮೆಯನ್ನು ಕೇಳುತ್ತೇನೆ, ಯಾವುದೋ ಒಂದು ಅಪಘಾತದ ವಿಚಾರದಲ್ಲಿ ಒಂದಷ್ಟು ಮಾಹಿತಿಯನ್ನು ಸಂಗ್ರಹಿಸುವುದಕ್ಕಾಗಿ ಹೋಗಿದ್ದ ಸಬ್ ಇನ್‌ಸ್ಪೆಕ್ಟರ್‌ರವರೊಬ್ಬರು ತೀರಿಕೊಂಡರು ಅದಕ್ಕಾಗಿ ಎರಡು ನಿಮಿಷ ತಡವಾಯಿತು.

ವಿಜಾಪುರ ನಗರದಲ್ಲಿ ಸಿಗ್ನಲ್ ದೀಪಗಳ ಅಳವಡಿಕೆ

2345 - ಶ್ರೀ ಬಸನಗೌಡ ಪಾಟೀಲ್ (ವಿಜಾಪುರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ವಿಜಾಪುರ ನಗರದಲ್ಲಿರುವ ಸಂಚಾರಿ ಸಿಬ್ಬಂದಿ ಎಷ್ಟು?*

ಆ) *ವಿಜಾಪುರ ನಗರ ದಿನದಿಂದ ದಿನಕ್ಕೆ ಸಂಚಾರಿ ದೃಷ್ಟಿಯಿಂದ ಸಮಸ್ಯೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;*

ಇ) *ವಿಜಾಪುರ ನಗರದಲ್ಲಿ ಸಂಚಾರ ಸುವ್ಯವಸ್ಥೆ ದೃಷ್ಟಿಯಿಂದ ಸಿಗ್ನಲ್ ದೀಪಗಳನ್ನು ಅಳವಡಿಸುವ ವಿಚಾರದಾ ಸರ್ಕಾರದ ಗಮನಕ್ಕೆ ಬಂದಿದೆಯೆ;*

ಈ) *ಈ ವಿಷಯದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?*

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

ಅ) ಪೊಲೀಸ್ ಸಬ್-ಇನ್ಸ್‌ಪೆಕ್ಟರ್‌ಗಳು	-	2
ಸಹಾಯಕ ಪೊಲೀಸ್ ಸಬ್-ಇನ್ಸ್‌ಪೆಕ್ಟರ್‌ಗಳು	-	2
ಸಿವಿಲ್ ಹೆಡ್ ಕಾನ್ಸ್‌ಟೇಬಲ್‌ಗಳು	-	10
ಸಿವಿಲ್ ಪೊಲೀಸ್ ಕಾನ್ಸ್‌ಟೇಬಲ್‌ಗಳು	-	30

ಆ) ಹೌದು

ಇ) ಹೌದು

ಈ1)ಮುಖ್ಯರಸ್ತೆಗಳನ್ನು ವಿಶಾಲಗೊಳಿಸಿ ಸಂಚಾರ ಸುಗಮಗೊಳಿಸಲಾಗಿರುತ್ತದೆ.

2) ಭಾರೀ ವಾಹನಗಳ ಓಡಾಟವನ್ನು ಜನನಿಬಿಡ ಸ್ಥಳಗಳಲ್ಲಿ ಪ್ರತಿಬಂಧಿಸಲಾಗಿದೆ.

3) ಪ್ರಮುಖ ರಸ್ತೆಯಾದ ಸಿದ್ದೇಶ್ವರ ರಸ್ತೆಯ ಪಕ್ಕದಲ್ಲಿ ವಾಹನ ನಿಲುಗಡೆ ಮಾಡುವ ವ್ಯವಸ್ಥೆ ಮಾಡಲಾಗಿದೆ.

4) ಸಿಗ್ನಲ್ ದೀಪಗಳಿಗಾಗಿ ಸರ್ವೆ ಮಾಡಿಸಲಾಗಿದ್ದು ವಾಟರ್ ಟ್ಯಾಂಕ್ ವೃತ್ತ, ಗಾಂಧೀ ಚೌಕ ಮತ್ತು ಬಸವೇಶ್ವರ ವೃತ್ತಗಳಲ್ಲಿ ಇದನ್ನು ಅಳವಡಿಸಲು ಯೋಜನೆ ತಯಾರಿಸಲಾಗಿದೆ.

ಶ್ರೀ ಬಸನಗೌಡ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಗೃಹ ಮಂತ್ರಿಗಳು ವಿಜಾಪುರ ನಗರದಲ್ಲಿರುವ ಸಂಚಾರಿ ಸಿಬ್ಬಂದಿ ಎಷ್ಟು? ಎಂಬ ನನ್ನ ಪ್ರಶ್ನೆಗೆ ಇಬ್ಬರು ಪೊಲೀಸ್ ಸಬ್ ಇನ್‌ಪೆಕ್ಟರ್‌ಗಳು ಎಂಬ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ನನಗೆ ತಿಳಿದ ಮಟ್ಟಿಗೆ ಅಲ್ಲಿ ಒಬ್ಬರೇ ಸಂಚಾರಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಇದ್ದಾರೆ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟೀಕರಣ ಕೊಡಬೇಕು. ವಿಜಾಪುರ ನಗರದಲ್ಲಿ ದಿನದಿಂದ ದಿನಕ್ಕೆ ಸಂಚಾರದ ಅಡ್ಡಿ ಆತಂಕಗಳು ಹೆಚ್ಚಾಗಿ ಸಮಸ್ಯೆಯಾಗುತ್ತಿರುವುದನ್ನು ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಯಾವ ಯಾವ ಪ್ರಮುಖ ರಸ್ತೆಗಳಲ್ಲಿ ಏನೇನು ಕ್ರಮಗಳನ್ನು ಕೈಗೊಂಡಿದ್ದಾರೆ ಎಂಬ ಬಗ್ಗೆ 'ಭಾರಿ ವಾಹನಗಳ ಓಡಾಟವನ್ನು ಜನನಿಬಿಡ ಸ್ಥಳಗಳಲ್ಲಿ ಪ್ರತಿಬಂಧಿಸಲಾಗಿದೆ' ಎಂಬ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಸನ್ಮಾನ್ಯ ಅಧ್ಯಕ್ಷರೇ, ವಿಜಾಪುರದ ಹಿಂಡಿ ರಸ್ತೆಯಲ್ಲಿ....

ಅಧ್ಯಕ್ಷರು : ಇಷ್ಟು ದಿವಸದಿಂದ ಸದನದ ಕಾರ್ಯಕಲಾಪಗಳಲ್ಲಿ ಪಾಲ್ಗೊಳ್ಳುತ್ತಿದ್ದೀರಿ. ಇಲ್ಲಿ ಭಾಷಣ ಮಾಡಬೇಡಿ. ಬೇಗ ನಿಮ್ಮ ಉಪ ಪ್ರಶ್ನೆ ಕೇಳಿ.

ಶ್ರೀ ಬಸನಗೌಡ ಪಾಟೀಲ್ : ಹಿಂಡಿ ರಸ್ತೆಯಲ್ಲಿರುವಂತಹ ಒಂದು ಪ್ರದೇಶದಲ್ಲಿ ಕೇವಲ ವಾಹನಗಳನ್ನು ಪ್ರತಿಬಂಧಿಸಲಾಗಿದೆ ಎಂಬ ಫಲಕವನ್ನು ಹಾಕುವುದರಿಂದ ಮಾತ್ರ ಸಂಚಾರಿ ವ್ಯವಸ್ಥೆಯನ್ನು ಸುಗಮಗೊಳಿಸಿದಂತಾಗುವುದಿಲ್ಲ. ಈ ಬಗ್ಗೆ ಸನ್ಮಾನ್ಯ ಮಂತ್ರಿಗಳು ಒಂದು ಸ್ಪಷ್ಟೀಕರಣವನ್ನು ಕೊಡಬೇಕು. ಇಲ್ಲಿ ಕೈಗೊಂಡ ಕ್ರಮಗಳೇನು ಎಂದರೆ ಕೇವಲ 'ಭಾರಿ ವಾಹನಗಳು ಈ ಪ್ರದೇಶದಲ್ಲಿ ಹೋಗಬಾರದು' ಎಂಬ ಫಲಕವನ್ನು ಹಾಕಿದ್ದೇವೆ ಎಂದು ಉತ್ತರಿಸಿದ್ದಾರೆ....

ಅಧ್ಯಕ್ಷರು : ಮಾನ್ಯ ರುಕ್ಮಯ್ಯ ಪೂಜಾರಿಯವರು ಈ ದಿಸೆಯಲ್ಲಿ ನನಗೆ ಸಹಾಯ ಮಾಡಬೇಕು. You must guide your members. ಉಪ ಪ್ರಶ್ನೆ ಕೇಳುವುದಕ್ಕೆ ಅವರಿಗೆ ಬಾರದೇ ಹೋದರೆ ನಾವೇನು ಮಾಡುವುದಕ್ಕಾಗುತ್ತದೆ. ಅನಾವಶ್ಯಕವಾಗಿ ಪ್ರಶ್ನೋತ್ತರದ ಸಮಯ ವ್ಯರ್ಥವಾಗುತ್ತಿದೆ. ಮಾನ್ಯ ಸದಸ್ಯರು ಸದನದ ಅಜೆಂಡಾವನ್ನು ಅವರಿಗೆ ಕಳುಹಿಸಿದಾಗ, ಮಾನ್ಯ ಮಂತ್ರಿಗಳು ಅವರ ಪ್ರಶ್ನೆಗೆ ಒದಗಿಸಿರುವ ಉತ್ತರವನ್ನು ಅದರಲ್ಲಿ ನೋಡಿಕೊಂಡು, ಉಪ ಪ್ರಶ್ನೆಗಳನ್ನು ಕೇಳಲು ಮಾನಸಿಕವಾಗಿ ಸಿದ್ಧರಾಗಿ ಸದನಕ್ಕೆ ಬರಬೇಕು. ನೀವು ಯಾರೂ ಅಜೆಂಡಾ ನೋಡಿಕೊಂಡು ಸಿದ್ಧರಾಗಿ ಬರುವುದಿಲ್ಲ, ಆದ್ದರಿಂದಲೇ ಪ್ರಶ್ನೋತ್ತರ ನಡೆಸಲು ನನಗೆ ಇಲ್ಲಿ ಕಷ್ಟವಾಗುತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸನ್ಮಾನ್ಯ ಅಧ್ಯಕ್ಷರೇ, ಬಿಜಾಪುರ ನಗರದಲ್ಲಿ ಸಂಚಾರಿ ವ್ಯವಸ್ಥೆಯನ್ನು ಉತ್ತಮಗೊಳಿಸಲಿಕ್ಕೆ ಒಂದು ಪ್ರಾಮಾಣಿಕವಾದ ಪ್ರಯತ್ನವನ್ನು ನಾನು ಮಾಡುತ್ತೇನೆ. ಅಲ್ಲಿ ಏಕಮುಖ ರಸ್ತೆ ಮಾಡತಕ್ಕದ್ದು, ಸಿಗ್ನಲ್ ದೀಪಗಳನ್ನು ಅಳವಡಿಸತಕ್ಕದ್ದು ಮತ್ತು ಏಕಮುಖ ರಸ್ತೆಗಳನ್ನು ಮಾಡಿರತಕ್ಕದ್ದನ್ನು ಕಟ್ಟುನಿಟ್ಟಾಗಿ ಎನ್‌ಫೋರ್ಸ್ ಮಾಡತಕ್ಕ ವಿಚಾರಗಳಲ್ಲಿ ಇನ್ನೂ ಹೆಚ್ಚಿನ ಪ್ರಗತಿಯನ್ನು ತೋರಿಸಲಿಕ್ಕೆ ನಾನು ಪ್ರಯತ್ನ ಪಡುತ್ತೇನೆ.

ಶ್ರೀ ಬಸನಗೌಡ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಸಿಗ್ನಲ್ ದೀಪಗಳಿಗಾಗಿ ಸರ್ವೆ ನಡೆಸಲಾಗಿದ್ದು ವಾಟರ್ ಟ್ಯಾಂಕ್ ವೃತ್ತ, ಗಾಂಧಿ ಚೌಕ ಮತ್ತು ಬಸವೇಶ್ವರ ವೃತ್ತಗಳಲ್ಲಿ ಇದನ್ನು ಅಳವಡಿಸಲು ಯೋಜನೆಯೊಂದನ್ನು ತಯಾರಿಸಲಾಗಿದೆ ಎಂದು ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಅದೇ ರೀತಿ ಸ್ಟೇಡಿಯಂ ಸಮೀಪ ಇರುವ ರಸ್ತೆಯಲ್ಲೂ ಕೂಡ ಬಹಳಷ್ಟು ಅಪಘಾತಗಳು ಆಗುತ್ತಿವೆ. ದಿವಸಕ್ಕೆ 3-4 ಅಪಘಾತಗಳು ಅಲ್ಲಿ ಸಂಭವಿಸುತ್ತಿರುವುದರಿಂದ ದಯವಿಟ್ಟು ಅಲ್ಲೂ ಕೂಡ ಸಿಗ್ನಲ್ ದೀಪಗಳನ್ನು ಅಳವಡಿಸತಕ್ಕದ್ದರ ಬಗ್ಗೆ ಪರಿಶೀಲನೆ ಮಾಡಬೇಕು. ಮತ್ತೊಂದು ಪ್ರಮುಖವಾದ ವಿಚಾರವೆಂದರೆ, ಬಿಜಾಪುರ ಒಂದು ಸಿಂಧಗಿ ನಡುವಿನ ರಾಷ್ಟ್ರೀಯ ಹೆದ್ದಾರಿ 13ರಲ್ಲಿ ಕನಿಷ್ಟ ಒಂದು ತಿಂಗಳಿಗೆ ಒಂದು ಅಪಘಾತವಾದರೂ ನಿಶ್ಚಿತವಾಗಿ ಆಗುತ್ತಿರುವುದರಿಂದ ದಯವಿಟ್ಟು ಅಲ್ಲಿಗೆ ಟ್ರಾಫಿಕ್ ಪೊಲೀಸ್ ವ್ಯವಸ್ಥೆ ಮಾಡಿದರೆ ಹೆಚ್ಚು ಅನುಕೂಲವಾಗುತ್ತದೆ, ಇಲ್ಲದಿದ್ದರೆ ಅಲ್ಲಿನ ಭಯಂಕರ ಪರಿಸ್ಥಿತಿಯಿಂದಾಗಿ ಜನರಿಗೆ ಭೀತಿಯುಂಟಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಅವರು ಕೇಳಿರತಕ್ಕ ಮುಖ್ಯವಾದ ರಸ್ತೆಯಲ್ಲಿ ಸಿಗ್ನಲ್ ದೀಪಗಳನ್ನು ಅಳವಡಿಸುವುದರ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಇನ್ನು ರಾಷ್ಟ್ರೀಯ ಹೆದ್ದಾರಿ 13ರಲ್ಲಿ ಟ್ರಾಫಿಕ್ ಪೋಲೀಸ್ ವ್ಯವಸ್ಥೆ ಮಾಡುವುದರ ಬಗ್ಗೆ ಅವರು ಕೇಳಿದ್ದಾರೆ. ಕೇವಲ ಅದೊಂದು ಹೆದ್ದಾರಿಯಷ್ಟೆ ಅಲ್ಲ, ಇಡೀ ರಾಜ್ಯದಲ್ಲಿರತಕ್ಕ ಎಲ್ಲಾ ರಾಷ್ಟ್ರೀಯ ಹೆದ್ದಾರಿಗಳು, ಮೇಜರ್ ಡಿಸ್ಟ್ರಿಕ್ಟ್ ರೋಡ್ಸ್ ಹಾಗೂ ಜಿಲ್ಲಾ ಪಂಚಾಯಿತಿಯ ವಶದಲ್ಲಿರತಕ್ಕ ರಸ್ತೆಗಳೇನಿವೆ, ಅಲ್ಲೆಲ್ಲಾ ರೋಡ್

ಸೇಫ್ಟಿ ಟ್ರಾಫಿಕ್ ಇಂಜಿನಿಯರಿಂಗ್ ಹಾಗೂ ಟ್ರಾಫಿಕ್ ಸಿಗ್ನಲ್‌ಗಳು ಇವನ್ನೆಲ್ಲಾ ಹೆಚ್ಚು ಮಾಡುತ್ತೇವೆ. ಈ ಸಂಚಾರದ ಒಂದು ವ್ಯವಸ್ಥೆಯನ್ನು ಉತ್ತಮಗೊಳಿಸಬೇಕಾದರೆ ಇನ್ನೂ ಅನೇಕ ಕಾರ್ಯಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳಬೇಕೆಂದು ನಿರ್ಣಯ ಮಾಡಿದ್ದೇವೆ. ಈಗಾಗಲೇ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ 'ಡಿಸ್ಟ್ರಿಕ್ಟ್ ರೋಡ್ ಸೇಫ್ಟಿ ಕಮಿಟಿ' ಎಂದು ಇದೆ. ರಾಜ್ಯ ಮಟ್ಟದಲ್ಲಿ ಸಾರಿಗೆ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಇನ್ನೊಂದು ರೋಡ್ ಸೇಫ್ಟಿ ಕಮಿಟಿ ಎಂದು ಇದೆ. ಇವೆರಡೂ ಸಮಿತಿಗಳನ್ನೂ ಸಹಿತ ನಾವು ಪುನರ್-ರಚಿಸಿದ್ದೇವೆ. ಆದರೆ ಇದಕ್ಕೆ ಹಣವನ್ನು ಇದುವರೆಗೂ ಕೊಟ್ಟಿರಲಿಲ್ಲ, ಒಂದು ಜಿಲ್ಲೆಗೆ ಒಂದು ಲಕ್ಷ ರೂಪಾಯಿಗಳಂತೆ ಪ್ರತಿ ವರ್ಷ ಸಹಿತ ಕೊಡುತ್ತಿದ್ದರು. ಈ ವರ್ಷ ರಾಜ್ಯದಲ್ಲಿ ವಿಶೇಷವಾಗಿ ಈ ರೋಡ್ ಸೇಫ್ಟಿ ಕಮಿಟಿಗಳಿಗೆಂದು, ಬಿಜಾಪುರ ಜಿಲ್ಲೆಯನ್ನೂ ಸೇರಿಸಿ ಪ್ರತಿ ಜಿಲ್ಲೆಗೆ ಸಹಿತ ಸಿಗ್ನಲ್ ದೀಪಗಳನ್ನು ಹಾಕಲಿಕ್ಕೆ, ರೋಡ್ ಶೆಲ್ಟರ್‌ಗಳನ್ನು ಇಂಪ್ರೂವ್ ಮಾಡಲಿಕ್ಕೆ ಅವರ ಹೇಳತಕ್ಕಂಥ ಸಿಗ್ನಲ್ ದೀಪಗಳನ್ನು ಹಾಕಲಿಕ್ಕೆ ಪ್ರತಿ ಜಿಲ್ಲೆಗೆ ಕನಿಷ್ಟ ಪಕ್ಷ 5 ಲಕ್ಷ ರೂಪಾಯಿಗಳನ್ನು ಕೊಡಬೇಕು ಎನ್ನತಕ್ಕ ಪರಿಶೀಲನೆ ಇದೆ. ಬೆಂಗಳೂರು ನಗರ, ಹುಬ್ಬಳ್ಳಿ ಮಹಾನಗರ ಈ ರೀತಿ ಮಹಾನಗರದೊಳಗೆ, ಬಿಜಾಪುರ ನಗರವೂ ಸೇರಿದಂತೆ, ಎಲ್ಲಿ ವಾಹನಗಳ ಸಂಖ್ಯೆ ಜಾಸ್ತಿ ಇದೆ, ಅಲ್ಲಿ ರೋಡ್ ಟ್ರಾಫಿಕ್‌ನ್ನು ಸುಧಾರಣೆ ಮಾಡಲಿಕ್ಕೆ ಸುಮಾರು 2 ಕೋಟಿ ರೂಪಾಯಿಗಳಷ್ಟು ಹಣವನ್ನು ಸರ್ಕಾರದ ವತಿಯಿಂದ ಬಿಡುಗಡೆ ಮಾಡತಕ್ಕ ಪರಿಶೀಲನೆಯನ್ನೂ ಸಹಿತ ನಾವು ಮಾಡುತ್ತಿದ್ದೇವೆ.

ಶ್ರೀ ಬಸನಗೌಡ ಪಾಟೀಲ್ : ಬಿಜಾಪುರ ನಗರದಲ್ಲಿ ಇರುವ ಸಂಚಾರಿ ಸಿಬ್ಬಂದಿ ಎಷ್ಟು ಎನ್ನುವ ಪ್ರಶ್ನೆಗೆ ಇಬ್ಬರು ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ಗಳು ಅಲ್ಲಿದ್ದಾರೆ ಎಂಬ ಉತ್ತರ ಕೊಟ್ಟಿದ್ದಾರೆ. ಆದರೆ ನನಗೆ ಬಂದ ಮಾಹಿತಿ ಪ್ರಕಾರ ಅಲ್ಲಿ ಒಬ್ಬರೇ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಇದ್ದಾರೆ. ಮಾನ್ಯ ಮಂತ್ರಿಗಳು ಅದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಅಲ್ಲಿಗೆ ಇನ್ನೊಬ್ಬ ಸಬ್ ಇನ್ಸ್‌ಪೆಕ್ಟರ್ ನೇಮಿಸಿ. ಅವರೇನು ಬಹಳಷ್ಟು ಸಂಖ್ಯೆಯಲ್ಲಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅದು ಆಗುವುದಿಲ್ಲ, ರಾಜ್ಯದಲ್ಲಿ ಸದ್ಯಕ್ಕೆ ಸಬ್ ಇನ್ಸ್‌ಪೆಕ್ಟರ್‌ಗಳ ಕೊರತೆ ಇದೆ. ಈಗಾಗಲೇ ಅಲ್ಲಿ ಇಬ್ಬರು ಸಬ್ ಇನ್ಸ್‌ಪೆಕ್ಟರ್‌ಗಳು ಇದ್ದಾರೆ. ಪೊಲೀಸ್ ಸಿಬ್ಬಂದಿಯನ್ನು ಕೇವಲ ಹೆಚ್ಚು ಮಾಡುವುದರಿಂದಾಗಿ, ಟ್ರಾಫಿಕ್‌ನಲ್ಲಿ ಗಣನೀಯವಾಗಿ ಸುಧಾರಣೆಯಾಗುತ್ತದೆಂದು ನಾನಂತೂ ತಿಳಿದುಕೊಂಡಿಲ್ಲ.

ಕಬಿನಿ ಏತ ನೀರಾವರಿ ಯೋಜನೆ

2447 - ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಗುಂಡ್ಲುಪೇಟೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಬಿನಿ ಎರಡನೇ ಹಂತದ ಏತ ನೀರಾವರಿ ಯೋಜನೆ ಮಂಜೂರಾಗಿದೆಯೇ?

ಆ) ಹಾಗಿದ್ದಲ್ಲಿ, ಈ ನೀರಾವರಿ ಯೋಜನೆಗೆ ಒಳಪಡುವ ತಾಲ್ಲೂಕುಗಳು ಯಾವುವು ಹಾಗೂ ಭೂಮಿಯ ವಿಸ್ತೀರ್ಣವೆಷ್ಟು?

ಇ) ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ಹಾಗೂ ಇದನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) :

ಅ) ಇಲ್ಲ

ಆ) ಮತ್ತು ಇ) ಯೋಜನೆಯು ಅನ್ವೇಷಣಾ ಹಂತದಲ್ಲಿದೆ.